FINAL ANSWER KEY

Question Paper Code:	166/2026/OL
Category Code:	194/2025
Exam:	BeeKeeping Fieldman
Date of Test	15-10-2026
Department	Kerala Khadi And Village Industries Board
Language:	Kannada

Question1:-ಭಾರತದ ಸ್ವಾತಂತ್ರ್ಯಕ್ಕಾಗಿ ರೂಪುಗೊಂಡ "ಇಂಡಿಯನ್ ರಿಪಬ್ಲಿಕನ್ ಆರ್ಮಿ" ಎಂಬ ಚಳುವಳಿಯ ಸ್ಥಾಪಕರು ಯಾರು?

A:- ಸುಭಾಷ್ ಚಂದ್ರ ಬೋಸ್

B:-ಸೂರ್ಯ ಸೇನ್

C:-ಎನ್.ಎಂ. ಜೋಶಿ

D:-ಬರಿಂದ್ರ ಕುಮಾರ್ ಘೋಷ್

Correct Answer:- Option-B

Question2:-ಕೇರಳದಲ್ಲಿ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ "ವರಿಗ ವರಿಗ ಸಹಜರೇ, ಸಹನ ಸಮರ ಸಮಯಮಾಯಿ" ಎಂಬ ಹಾಡನ್ನು ಪ್ರಸಿದ್ಧವಾಗಿ ಹಾಡಲಾಯಿತು. ಇದು ಯಾವ ಚಳುವಳಿಗೆ ಸಂಬಂಧಿಸಿದೆ?

A:-ಸ್ವದೇಶಿ ಚಳುವಳಿ

B:- ಕ್ವಿಟ್ ಇಂಡಿಯಾ ಚಳುವಳಿ

C:-ಐಕ್ಯ ಕೇರಳ ಚಳುವಳಿ (United Kerala Movement)

D:-ಉಪ್ಪಿನ ಸತ್ಯಾಗ್ರಹ

Correct Answer:- Option-D

Question3:-ದಕ್ಷಿಣ ಅಮೆರಿಕದ "ಜಾರ್ಜ್ ವಾಷಿಂಗ್ಟನ್" ಎಂದು ಕರೆಯಲ್ಪಡುವ ನಾಯಕ ಯಾರು?

A:-ಥಾಮಸ್ ಜೆಫರ್ಸನ್

B:- ಫ್ರಾನ್ಸಿಸ್ಕೋ ಮಿರಾಂಡಾ

C:-ಸೈಮನ್ ಬೊಲಿವರ್

D:-ಜೋಸ್ ಡಿ ಸ್ಯಾನ್ ಮಾರ್ಟಿನ್

Correct Answer:- Option-C

Question4:-ರಾಷ್ಟ್ರೀಯ ಚಳುವಳಿಯ ಸಮಯದಲ್ಲಿ 'ವಾಯ್ಸ್ ಆಫ್ ಇಂಡಿಯಾ' ಎಂಬ ಪತ್ರಿಕೆಯನ್ನು ಪ್ರಕಟಿಸಿದ ಸ್ವಾತಂತ್ರ್ಯ ಹೋರಾಟಗಾರ ಯಾರು?

A:-ಸುರೇಂದ್ರನಾಥ ಬ್ಯಾನರ್ಜಿ

B:- ದಾದಾಭಾಯಿ ನೌರೋಜಿ

C:-ಲಾಲಾ ಲಜಪತ್ ರಾಯ್

D:-ಬಾಲ ಗಂಗಾಧರ ತಿಲಕ್

Correct Answer:- Option-B

Question5:-ಕೀಳರಿಯೂರ್ ಬಾಂಬ್ ಪ್ರಕರಣವು ಯಾವ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದೆ?

A:-ಕ್ವಿಟ್ ಇಂಡಿಯಾ

B:- ಉಪ್ಪಿನ ಸತ್ಯಾಗ್ರಹ

C:-ಅಸಹಕಾರ ಚಳುವಳಿ

D:-ಕಾನೂನು ಭಂಗ ಚಳುವಳಿ

Correct Answer:- Option-A

Question6:-'ಫಿಸಿಯೋಕ್ರಾಟ್ಸ್' ಎಂದು ಕರೆಯಲ್ಪಡುವ ಅರ್ಥಶಾಸ್ತ್ರಜ್ಞರು ಯಾವ ಕ್ರಾಂತಿಗೆ ಸಂಬಂಧಿಸಿದ್ದಾರೆ?

A:-ಅಮೇರಿಕದ ಕ್ರಾಂತಿ

B:-ಚೀನಾದ ಕ್ರಾಂತಿ

C:-ಫ್ರೆಂಚ್ ಕ್ರಾಂತಿ

D:-ರಷ್ಯಾದ ಕ್ರಾಂತಿ

Correct Answer:- Option-C

Question7:-"ಇಂಡಿಯಾ ವಿನ್ಸ್ ಫ್ರೀಡಮ್" ಕೃತಿಯನ್ನು ರಚಿಸಿದವರು ಯಾರು?

A:-ಮೌಲಾನಾ ಅಬ್ದುಲ್ ಕಲಾಂ ಆಜಾದ್

B:-ಆನಿ ಬೆಸೆಂಟ್

C:-ಜವಾಹರಲಾಲ್ ನೆಹರು

D:-ಸರೋಜಿನಿ ನಾಯ್ಡು

Correct Answer:- Option-A

Question8:-ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ:
(i) ದೇವಾಲಯ ಪ್ರವೇಶ ಘೋಷಣೆ
(ii) ಚನ್ನಾರ್ ದಂಗೆ
(iii) ಅರುವಿಪ್ಪುರಂ ಪ್ರತಿಷ್ಠಾಪನೆ
(iv) ಗುರುವಾಯೂರ್ ಸತ್ಯಾಗ್ರಹ

A:-(iii), (ii), (i), (iv)

B:-(ii), (iii), (iv), (i)

C:-(i), (ii), (iii), (iv)

D:-(i), (iii), (iv), (ii)

Correct Answer:- Option-B

Question9:-"ಸ್ತ್ರೀಗೆ ಮಾತೃತ್ವ ಹೇಗೋ, ಪುರುಷನಿಗೆ ಯುದ್ಧವೂ ಹಾಗೆಯೇ" — ಈ ಮಾತುಗಳು ಯಾರವು?

A:-ಅಡಾಲ್ಫ್ ಹಿಟ್ಲರ್

B:- ಲೂಯಿಸ್ XVI

C:-ಬೆನಿಟೊ ಮುಸೊಲಿನಿ

D:-ನೆಪೋಲಿಯನ್

Correct Answer:- Option-C

Question10:-ತಿರು-ಕೊಚ್ಚಿಯಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗಿ ಕಂಪನಿಯೊಂದಕ್ಕೆ ವಹಿಸಿಕೊಟ್ಟ ದಿವಾನ್ ಯಾರು?

A:-ರಾಜಾ ಕೇಶವದಾಸರು

B:- ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್

C:- ಆರ್.ಕೆ. ಷಣ್ಮುಖಂ ಚೆಟ್ಟಿ

D:-ಟಿ. ಮಾಧವ ರಾವ್

Correct Answer:- Option-C

Question11:-ಉತ್ತರದ ಪರ್ವತ ಪ್ರದೇಶಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ?
(i) ಈ ಪರ್ವತ ಶ್ರೇಣಿಗಳು ನವೀನ ಮತ್ತು ಎತ್ತರವಾಗಿವೆ
(ii) ಇವು ಶಿಲಾ ಪದರಗಳ ಬಿರುಕು ಬಿಡುವಿಕೆಯಿಂದ ಉಂಟಾದ ಮಡಿಕೆ ಪರ್ವತಗಳಾಗಿವೆ
(iii) ಇವು ಪಶ್ಚಿಮದಲ್ಲಿ ಸಿಂಧೂ ನದಿಯಿಂದ ಪೂರ್ವದಲ್ಲಿ ಬ್ರಹ್ಮಪುತ್ರ ನದಿಯವರೆಗೆ ವಿಸ್ತರಿಸಿವೆ
(iv) ಇಲ್ಲಿ ಎತ್ತರದ ಶಿಖರಗಳು, ಹಿಮನದಿಗಳು ಮತ್ತು ಕಣಿವೆಗಳು ಕಂಡುಬರುತ್ತವೆ

A:-(i)

B:-(ii)

C:-(iii)

D:-(iv)

Correct Answer:- Option-B

Question12:-ಭೂಸ್ವರೂಪದ ಲಕ್ಷಣಗಳ ಆಧಾರದ ಮೇಲೆ, ಉತ್ತರ ಭಾರತದ ಬಯಲನ್ನು ಉತ್ತರದಿಂದ ದಕ್ಷಿಣಕ್ಕೆ ಮೂರು ಮುಖ್ಯ ವಲಯಗಳಾಗಿ ವಿಂಗಡಿಸಲಾಗಿದೆ. ಅವು ಯಾವುವು?

A:-ಭಾಬರ್, ತರಾಯಿ, ಮೆಕ್ಕಲು ಬಯಲುಗಳು

B:-ಭಾಬರ್, ಭಂಗರ್, ತರಾಯಿ

C:-ಭಾಬರ್, ಭಂಗರ್, ಮೆಕ್ಕಲು ಬಯಲುಗಳು

D:-ಭಂಗರ್, ತರಾಯಿ, ಮೆಕ್ಕಲು ಬಯಲುಗಳು

Correct Answer:- Option-D

Question13:-ದ್ವೀಪಕಲ್ಪ ಭಾರತದ ಅತ್ಯಂತ ಎತ್ತರದ ಶಿಖರ ಯಾವುದು?

A:- ಕಾಂಚನಜುಂಗಾ

B:-ತೊಟ್ಟಬೆಟ್ಟ

C:-ಮಹೇಂದ್ರಗಿರಿ

D:-ಆನೈಮುಡಿ

Correct Answer:- Option-D

Question14:-ಭಾರತ ಹವಾಮಾನ ಇಲಾಖೆಯ (IMD) ಪ್ರಧಾನ ಕಛೇರಿ ಎಲ್ಲಿದೆ?

A:-ಮುಂಬೈ

B:- ದೆಹಲಿ

C:-ಕೋಲ್ಕತ್ತಾ

D:-ಚೆನ್ನೈ

Correct Answer:- Option-B

Question15:-ಕೆಳಗಿನವುಗಳನ್ನು ಹೊಂದಿಸಿ

ಎ	ಬಿ
(i) ವಾತಾವರಣದ ಒತ್ತಡ	(1) ಹೈಗ್ರೋಮೀಟರ್
(ii) ವಾತಾವರಣದ ಆರ್ದ್ರತೆ	(2) ವಿಂಡ್ ವೇನ್
(iii) ಗಾಳಿಯ ವೇಗ	(3) ಬಾರೋಮೀಟರ್
(iv) ಗಾಳಿಯ ದಿಕ್ಕು	(4) ಎನಿಮೋಮೀಟರ್

A:-(i)-(3) (ii)-(4) (iii)-(1) (iv)-(2)

B:-(i)-(1) (ii)-(3) (iii)-(4) (iv)-(2)

C:-(i)-(3) (ii)-(2) (iii)-(4) (iv)-(1)

D:-(i)-(3) (ii)-(1) (iii)-(4) (iv)-(2)

Correct Answer:- Option-D

Question16:-ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

(i) ಮಹಾನದಿಯು ರಾಯ್‌ಪುರದ ಸಿಹಾವಾದಿಂದ ಹುಟ್ಟಿಕೊಂಡಿದೆ.
(ii) ಶಬರಿ ಮತ್ತು ಇಂದ್ರಾವತಿ ಗೋದಾವರಿ ಉಪನದಿಗಳು.
(iii) ಕಾವೇರಿಯು ಮಹಾರಾಷ್ಟ್ರದ ಮಹಾಬಲೇಶ್ವರದಿಂದ ಹುಟ್ಟಿಕೊಂಡಿದೆ.
(iv) ಕಬಿನಿ ಮತ್ತು ಭವಾನಿ ಕೃಷ್ಣನ ಉಪನದಿಗಳು.

A:-(i), (iii)

B:- (iii), (iv)

C:-(i), (ii)

D:-(ii), (iv)

Correct Answer:- Option-C

Question17:-ಭಾರತದ ಸ್ವಾಭಾವಿಕ ಸಸ್ಯವರ್ಗದಲ್ಲಿ ಈ ಕೆಳಗಿನವುಗಳಲ್ಲಿ ಯಾವುವು ಸೇರಿವೆ?

(i) ಉಷ್ಣವಲಯದ ನಿತ್ಯಹರಿದ್ವರ್ಣ ಕಾಡುಗಳು
(ii) ಎಲೆ ಉದುರಿಸುವ ಕಾಡುಗಳು
(iii) ಮುಳ್ಳಿನ ಪೊದೆಗಳು ಮತ್ತು ಸಣ್ಣ ಗಿಡಗಳು
(iv) ಮ್ಯಾಂಗ್ರೋವ್ (ಸಮುದ್ರತೀರದ) ಕಾಡುಗಳು
(v) ಪರ್ವತ ಕಾಡುಗಳು

A:- (i), (ii), (iii)

B:-(i), (iii), (v)

C:-(iii), (iv), (v)

D:-ಇವೆಲ್ಲವೂ

Correct Answer:- Option-D

Question18:-ನಕ್ಷೆಗಳನ್ನು ಅವುಗಳ ಮಾಪಕದ (scale) ಆಧಾರದ ಮೇಲೆ ದೊಡ್ಡ-ಮಾಪಕದ ನಕ್ಷೆಗಳು ಮತ್ತು ಸಣ್ಣ-ಮಾಪಕದ ನಕ್ಷೆಗಳೆಂದು ವರ್ಗೀಕರಿಸಲಾಗುತ್ತದೆ. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುವು ಸಣ್ಣ-ಮಾಪಕದ ನಕ್ಷೆಗಳ ಲಕ್ಷಣಗಳನ್ನು ವಿವರಿಸುತ್ತವೆ?

(i) ಸಣ್ಣ ಪ್ರದೇಶದ ಬಗ್ಗೆ ವಿವರವಾದ ಮಾಹಿತಿಯನ್ನು ತೋರಿಸುತ್ತದೆ

(ii) ಭೂಲಕ್ಷಣ ನಕ್ಷೆ , ಗ್ರಾಮದ ನಕ್ಷೆ

(iii) ಪ್ರಪಂಚದ ನಕ್ಷೆ, ಭಾರತದ ನಕ್ಷೆ

(iv) ಒಂದು ಪ್ರದೇಶದ ಬಗ್ಗೆ ಕೇವಲ ಸಾಮಾನ್ಯ ಮಾಹಿತಿಯನ್ನು ತೋರಿಸುತ್ತದೆ

A:-(iii), (iv)

B:-(i), (iii)

C:-(i), (iv)

D:-(ii), (iii)

Correct Answer:- Option-A

Question19:-ಈ ಕೆಳಗಿನವುಗಳಲ್ಲಿ ಯಾವುದು ವಸಂತ ಋತುವಿನ ಲಕ್ಷಣವಾಗಿದೆ?

A:-ಹಗಲಿನ ಅವಧಿಯು ಕ್ರಮೇಣ ಹೆಚ್ಚಾಗುತ್ತದೆ

B:- ಹೆಚ್ಚಿನ ವಾತಾವರಣದ ತಾಪಮಾನ

C:-ಹಗಲಿನ ಅವಧಿಯು ಕ್ರಮೇಣ ಕಡಿಮೆಯಾಗುತ್ತದೆ

D:-ದೀರ್ಘ ರಾತ್ರಿಗಳು

Correct Answer:- Option-A

Question20:-ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯವು ಎಲ್ಲಿದೆ?

A:-ತಿರುವನಂತಪುರಂ

B:-ಬೆಂಗಳೂರು

C:-ಕೋಲ್ಕತ್ತಾ

D:-ಒರಿಸ್ಸಾ

Correct Answer:- Option-B

Question21:-ಹೊಂದಿಸಿ ಬರೆಯಿರಿ

A-ಬ್ಯಾಂಕುಗಳು	B-ಲಕ್ಷಣಗಳು
(i) ಎಕ್ಸಿಮ್ ಬ್ಯಾಂಕ್ ಆಫ್ ಇಂಡಿಯಾ	(1) ಸಾಮಾನ್ಯ ಜನರಿಗೆ ಸಣ್ಣ ಸಾಲಗಳು ಸೇರಿದಂತೆ ವಿವಿಧ ಹಣಕಾಸು ಸೇವೆಗಳನ್ನು ಒದಗಿಸುವ ಗುರಿ ಹೊಂದಿದೆ
(ii) ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್	(2) ಗ್ರಾಮೀಣ ಕೈಗಾರಿಕೆಗಳಿಗೆ ಮರುಜೀವ ನೀಡುವ ಗುರಿ ಹೊಂದಿದೆ
(iii) ನಾಬಾರ್ಡ್ (NABARD)	(3) ಗ್ರಾಮೀಣ ಮತ್ತು ಕೃಷಿ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುವ ಭಾರತದ ಅತ್ಯುನ್ನತ ಬ್ಯಾಂಕ್

(iv) ಮೈಕ್ರೋ ಫೈನಾನ್ಸ್ (4) ಉತ್ಪನ್ನಗಳ ರಪ್ತು ಮತ್ತು ಆಮದಿಗಾಗಿ ಸಾಲವನ್ನು ಒದಗಿಸುತ್ತದೆ

A:-(i)-(2), (ii)-(4), (iii)-(3), (iv)-(1)

B:-(i)-(4), (ii)-(2), (iii)-(3), (iv)-(1)

C:-(i)-(4), (ii)-(2), (iii)-(1), (iv)-(3)

D:-(i)-(2), (ii)-(4), (iii)-(1), (iv)-(3)

Correct Answer:- Option-B

Question22:-ಈ ಕೆಳಗಿನವುಗಳಲ್ಲಿ ಯಾವುದು ತಪ್ಪಾದ ಜೋಡಿಯಾಗಿದೆ?

A:-ಉಳಿತಾಯ ಠೇವಣಿ: ವ್ಯಕ್ತಿಗಳಲ್ಲಿ ಉಳಿತಾಯದ ಅಭ್ಯಾಸವನ್ನು ಬೆಳೆಸುವ ಮತ್ತು ಅಗತ್ಯಕ್ಕೆ ಅನುಗುಣವಾಗಿ ಹಣವನ್ನು ಹಿಂಪಡೆಯಲು ಅನುವು ಮಾಡಿಕೊಡುವ ಠೇವಣಿ

B:-ಚಾಲ್ತಿ ಠೇವಣಿ: ವ್ಯಾಪಾರ ವಹಿವಾಟುಗಳಿಗಾಗಿ ಉದ್ದೇಶಿಸಲಾದ ಖಾತೆ

C:-ಆವರ್ತಕ ಠೇವಣಿಗಳು : ಬ್ಯಾಂಕುಗಳು ಬಡ್ಡಿಯನ್ನು ಪಾವತಿಸುವುದಿಲ್ಲ

D:-ಸ್ಥಿರ ಠೇವಣಿ ಖಾತೆ : ತಕ್ಷಣವೇ ಹಿಂಪಡೆಯುವ ಅಗತ್ಯವಿಲ್ಲದ ಹಣವನ್ನು ಠೇವಣಿ ಮಾಡುವ ಖಾತೆ

Correct Answer:- Option-C

Question23:-ಭಾರತೀಯ ಯೋಜನೆಯ ಪ್ರಮುಖ ಘಟ್ಟಗಳು – ಸರಿಯಾದ ಕಾಲಾನುಕ್ರಮದಲ್ಲಿ ಜೋಡಿಸಿ.

A:-ಹತ್ತು ವರ್ಷಗಳ ಯೋಜನೆ → ರಾಷ್ಟ್ರೀಯ ಯೋಜನಾ ಸಮಿತಿ → ಬಾಂಬೆ ಯೋಜನೆ → ಜನರ ಯೋಜನೆ → ಯೋಜನಾ ಆಯೋಗ

B:-ಹತ್ತು ವರ್ಷಗಳ ಯೋಜನೆ → ಯೋಜನಾ ಆಯೋಗ → ಜನರ ಯೋಜನೆ (People's Plan) → ಬಾಂಬೆ ಯೋಜನೆ → ರಾಷ್ಟ್ರೀಯ ಯೋಜನಾ ಸಮಿತಿ

C:-ರಾಷ್ಟ್ರೀಯ ಯೋಜನಾ ಸಮಿತಿ → ಯೋಜನಾ ಆಯೋಗ → ಜನರ ಯೋಜನೆ → ಬಾಂಬೆ ಯೋಜನೆ → ಹತ್ತು ವರ್ಷಗಳ ಯೋಜನೆ

D:-ಯೋಜನಾ ಆಯೋಗ → ಹತ್ತು ವರ್ಷಗಳ ಯೋಜನೆ → ಜನರ ಯೋಜನೆ → ರಾಷ್ಟ್ರೀಯ ಯೋಜನಾ ಸಮಿತಿ → ಬಾಂಬೆ ಯೋಜನೆ

Correct Answer:- Option-A

Question24:-ಭಾರತದಲ್ಲಿ ಯೋಜನಾ ಆಯೋಗದ ಬದಲಿಗೆ ನೀತಿ ಆಯೋಗ ಯಾವಾಗ ಅಸ್ತಿತ್ವಕ್ಕೆ ಬಂದಿತು?

A:-1ನೇ ಜನವರಿ 2014

B:- 1ನೇ ಏಪ್ರಿಲ್ 2015

C:-1ನೇ ಏಪ್ರಿಲ್ 2014

D:-1ನೇ ಜನವರಿ 2015

Correct Answer:- Option-D

Question25:-ಸೆಂಟ್ರಲ್ ಸ್ಟಾಟಿಸ್ಟಿಕಲ್ ಆಫೀಸ್ (CSO) ಮತ್ತು ನ್ಯಾಷನಲ್ ಸ್ಯಾಂಪಲ್ ಸರ್ವೆ ಆಫೀಸ್ (NSSO) ವಿಲೀನದ ಮೂಲಕ 2019 ರಲ್ಲಿ ಯಾವ ಸಂಸ್ಥೆಯನ್ನು ರಚಿಸಲಾಯಿತು?

A:-ರಾಷ್ಟ್ರೀಯ ಸಾಂಖ್ಯಿಕ ಕಚೇರಿ (NSO)

B:- ಭಾರತದ ಯೋಜನಾ ಆಯೋಗ (PCI)

C:-ನೀತಿ ಆಯೋಗ (NITI Aayog)

D:-ಇವುಗಳಲ್ಲಿ ಯಾವುದೂ ಅಲ್ಲ

Correct Answer:- Option-A

Question26:-ಕೆಳಗೆ ನೀಡಲಾದ ಹೇಳಿಕೆಗಳ ಆಧಾರದ ಮೇಲೆ ವ್ಯಕ್ತಿಯನ್ನು ಗುರುತಿಸಿ:
- ಸಾವಿರಾರು ಜನರನ್ನು ಹಸಿವಿನಿಂದ ಪಾರು ಮಾಡಿದರು
- ಹಸಿರು ಕ್ರಾಂತಿಯ ಪಿತಾಮಹ
- 1914ರ ಮಾರ್ಚ್ 25 ರಂದು ಅಮೆರಿಕದಲ್ಲಿ ಜನಿಸಿದರು

A:-ಡಾ. ಎಂ.ಎಸ್. ಸ್ವಾಮಿನಾಥನ್

B:- ನಾರ್ಮನ್ ಇ. ಬೋರ್ಲಾಗ್

C:-ವರ್ಗೀಸ್ ಕುರಿಯನ್

D:-ಮಸನೊಬು ಫುಕುವೋಕಾ

Correct Answer:- Option-B

Question27:-ನೀತಿ ಆಯೋಗದ (NITI Aayog) ಪ್ರಸ್ತುತ ಸಿಇಒ (CEO) ಯಾರು?

A:-ರಾವ್ ಇಂದ್ರಜಿತ್ ಸಿಂಗ್

B:- ರಾಜೀವ್ ಗೌಬಾ

C:-ಅನುರಾಗ್ ಜೈನ್

D:-ಅಶೋಕ್ ಕುಮಾರ್ ಲಾಹಿರಿ

Correct Answer:- Option-C

Question28:-ರಾಷ್ಟ್ರೀಯ ಆರ್ಥಿಕತೆಯನ್ನು ಜಾಗತಿಕ ಆರ್ಥಿಕತೆಯೊಂದಿಗೆ ಸಂಯೋಜಿಸುವ ನೀತಿ ಯಾವುದು?

A:-ಉದಾರೀಕರಣ

B:- ಖಾಸಗೀಕರಣ

C:- ಜಾಗತೀಕರಣ

D:-ಸಂರಕ್ಷಣಾವಾದ

Correct Answer:- Option-C

Question29:-ಭಾರತದ ಪ್ರಮುಖ ಬೆಳೆ ಋತುಗಳಾದ ಖಾರಿಫ್, ರಾಬಿ ಮತ್ತು ಝೈದ್‌ಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ ಯಾವುದು?

A:-ಖಾರಿಫ್ ಬೆಳೆಗಳನ್ನು ಚಳಿಗಾಲದಲ್ಲಿ ಬಿತ್ತಲಾಗುತ್ತದೆ.

B:- ನೈಋತ್ಯ ಮಾನ್ಸೂನ್ ಆರಂಭದಲ್ಲಿ ರಾಬಿ ಬೆಳೆಗಳನ್ನು ಬಿತ್ತಲಾಗುತ್ತದೆ.

C:-ಗೋಧಿ ಮತ್ತು ಸಾಸಿವೆ ಪ್ರಮುಖ ಖಾರಿಫ್ ಬೆಳೆಗಳಾಗಿವೆ

D:-ಬೇಸಿಗೆಯ ಆರಂಭದಲ್ಲಿ ಝೈದ್ ಬೆಳೆಗಳನ್ನು ಬಿತ್ತಲಾಗುತ್ತದೆ

Correct Answer:- Option-D

Question30:-ಕೆಳಗೆ ನೀಡಿರುವ ಆಯ್ಕೆಗಳಿಂದ ಕೇವಲ ಕಬ್ಬಿಣದ ಅದಿರುಗಳನ್ನು ಒಳಗೊಂಡಿರುವ ಗುಂಪನ್ನು ಗುರುತಿಸಿ.

A:- ಕಬ್ಬಿಣ : ಲಿಗ್ನೈಟ್, ಲಿಮೊನೈಟ್, ಸಿಡೆರೈಟ್, ಬಾಕ್ಸೈಟ್

B:-ಕಬ್ಬಿಣ : ಹೆಮಟೈಟ್, ಮ್ಯಾಗ್ನೆಟೈಟ್, ಲಿಮೊನೈಟ್, ಸಿಡೆರೈಟ್

C:-ಕಬ್ಬಿಣ : ಲಿಗ್ನೈಟ್, ಹೆಮಟೈಟ್, ಸಿಡೆರೈಟ್, ಬಾಕ್ಸೈಟ್

D:-ಕಬ್ಬಿಣ : ಲಿಗ್ನೈಟ್, ಹೆಮಟೈಟ್, ಸಿಡೆರೈಟ್, ಇಲ್ಮೆನೈಟ್

Correct Answer:- Option-B

Question31:-ವಿಶ್ವದ ಅತೀ ದೊಡ್ಡ ಕಬ್ಬಿಣದ ಅದಿರು ಗಣಿಯಾದ ಕಾರಾಜಾಸ್ ಗಣಿ ಇರುವ ದೇಶ ಯಾವುದು?

A:-ಮಲೇಷಿಯಾ

B:-ರಷ್ಯಾ

C:-ಬ್ರೆಜಿಲ್

D:-ಆಸ್ಟ್ರೇಲಿಯಾ

Correct Answer:- Option-C

Question32:-ಮಹಾನದಿ ಡೆಲ್ಟಾದಿಂದ ಕೃಷ್ಣಾ ಡೆಲ್ಟಾದವರೆಗೆ ವಿಸ್ತರಿಸಿರುವ ಕರಾವಳಿ ಬಯಲು ಪ್ರದೇಶ ಯಾವುದು?

A:-ಕೋರಮಂಡಲ ಕರಾವಳಿ

B:- ಮಲಬಾರ್ ಕರಾವಳಿ

C:-ಉತ್ತರ ಸಿರ್ಕಾರ್‌ಗಳ ಕರಾವಳಿ

D:-ಕೊಂಕಣ ಕರಾವಳಿ

Correct Answer:- Option-C

Question33:-ಲುನಿ ನದಿಗೆ ಸಂಬಂಧಿಸಿದ ಅಂಶಗಳನ್ನು ಗುರುತಿಸಿ

(i) ಅಜ್ಮೀರ್ ಬಳಿಯ ಅರಾವಳಿ ಪರ್ವತ ಶ್ರೇಣಿಯಿಂದ ಉಗಮಿಸುತ್ತದೆ
(ii) ಇದು ಕಚ್‌ನ ಪ್ರದೇಶಕ್ಕೆ ಹರಿಯುತ್ತದೆ
(iii) ಲಿಲ್ರಿ ಮತ್ತು ಸುಕ್ರಿ ಇದರ ಉಪನದಿಗಳಾಗಿವೆ

A:-(i) ಮಾತ್ರ ಸರಿಯಾಗಿದೆ

B:- (i) ಮತ್ತು (ii) ಸರಿಯಾಗಿವೆ

C:-(ii) ಮತ್ತು (iii) ಸರಿಯಾಗಿವೆ

D:-(i), (ii) ಮತ್ತು (iii) ಸರಿಯಾಗಿವೆ

Correct Answer:- Option-D

Question34:-ಸಂವಿಧಾನದ 19ನೇ ಅನುಚ್ಛೇದದಲ್ಲಿ ಉಲ್ಲೇಖಿಸಲಾದ ಸ್ವಾತಂತ್ರ್ಯದ ಹಕ್ಕುಗಳಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸೇರಿಲ್ಲ?

A:-ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ

B:-ಸಂಘಗಳನ್ನು ರಚಿಸುವ ಹಕ್ಕು

C:-ಭಾರತದಾದ್ಯಂತ ಎಲ್ಲಿಯಾದರೂ ಶಾಶ್ವತವಾಗಿ ವಾಸಿಸುವ ಹಕ್ಕು

D:-ಅಲ್ಪಸಂಖ್ಯಾತ ಗುಂಪುಗಳ ಭಾಷೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವ ಹಕ್ಕು

Correct Answer:- Option-D

Question35:-ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾರತೀಯ ಸಂವಿಧಾನದ 'ಹೃದಯ ಮತ್ತು ಆತ್ಮ' ಎಂದು ಯಾವ ಮೂಲಭೂತ ಹಕ್ಕನ್ನು ಬಣ್ಣಿಸಿದ್ದಾರೆ?

A:-ಸಾಂವಿಧಾನಿಕ ಪರಿಹಾರದ ಹಕ್ಕು

B:- ಸಮಾನತೆಯ ಹಕ್ಕು

C:- ಸ್ವಾತಂತ್ರ್ಯದ ಹಕ್ಕು

D:-ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು

Correct Answer:- Option-A

Question36:-"ಭಾರತೀಯನಾಗಿರುವಾಗ, ನನ್ನ ಎಲ್ಲಾ ಹಕ್ಕುಗಳ ಜೊತೆಗೆ ಕೆಲವು ನಿರ್ದಿಷ್ಟ ಕರ್ತವ್ಯಗಳನ್ನೂ ನಾನು ಹೊಂದಿದ್ದೇನೆ ಎಂಬುದನ್ನು ಪ್ರತಿಯೊಬ್ಬರೂ ನೆನಪಿನಲ್ಲಿಟ್ಟುಕೊಳ್ಳಬೇಕು." - ಇವು ಯಾರ ಮಾತುಗಳು?

A:-ಸರ್ದಾರ್ ವಲ್ಲಭಭಾಯಿ ಪಟೇಲ್

B:- ಡಾ. ಬಿ.ಆರ್. ಅಂಬೇಡ್ಕರ್

C:-ಡಾ. ರಾಜೇಂದ್ರ ಪ್ರಸಾದ್

D:-ಜವಾಹರ್‌ಲಾಲ್ ನೆಹರು

Correct Answer:- Option-A

Question37:-ಸಂಸತ್ತು 'ಶಿಕ್ಷಣದ ಹಕ್ಕು ಕಾಯ್ದೆ'ಯನ್ನು ಅಂಗೀಕರಿಸಿದ ವರ್ಷ

A:-2002

B:- 2010

C:-2009

D:-2005

Correct Answer:- Option-C

Question38:-ಸಂವಿಧಾನದ IV ನೇ ಭಾಗದಲ್ಲಿ 'ರಾಜ್ಯ ನಿರ್ದೇಶಕ ತತ್ವಗಳು' ಸೇರಿವೆ

A:-ಅನುಚ್ಛೇದ 25 ರಿಂದ 28

B:-ಅನುಚ್ಛೇದ 36 ರಿಂದ 51

C:-ಅನುಚ್ಛೇದ 29 ರಿಂದ 30

D:-ಅನುಚ್ಛೇದ 14 ರಿಂದ 18

Correct Answer:- Option-B

Question39:-ಕಾನೂನುಬಾಹಿರವಾಗಿ ಬಂಧನದಲ್ಲಿರುವ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ನ್ಯಾಯಾಲಯವು ಹೊರಡಿಸುವ ಆದೇಶ

A:-ಮ್ಯಾಂಡಮಸ್

B:- ನಿಷೇಧಾಜ್ಞೆ (ಪ್ರೋಹಿಬಿಷನ್)

C:- ಹೇಬಿಯಸ್ ಕಾರ್ಪಸ್

D:-ಕ್ವೋ ವಾರಂಟೋ

Correct Answer:- Option-C

Question40:-ಭಾರತದಲ್ಲಿ 'ಸಂವಿಧಾನ ದಿನ'ವನ್ನು ಆಚರಿಸುವ ದಿನಾಂಕ

A:-ಜನವರಿ 26

B:- ನವೆಂಬರ್ 26

C:- ಆಗಸ್ಟ್ 15

D:-ಜನವರಿ 25

Correct Answer:- Option-B

Question41:-ರಕ್ತ ಹೆಪ್ಪುಗಟ್ಟುವಿಕೆಗೆ ಸಹಾಯ ಮಾಡುವ ಪ್ರಮುಖ ಜೀವಸತ್ವ (ವಿಟಮಿನ್) ಯಾವುದು?

A:-ವಿಟಮಿನ್ K

B:- ವಿಟಮಿನ್ B12

C:-ವಿಟಮಿನ್ C

D:-ವಿಟಮಿನ್ E

Correct Answer:- Option-A

Question42:-ಮೆದುಳಿನ ಯಾವ ಭಾಗವು ದೇಹದ ಉಷ್ಣತೆಯನ್ನು ನಿಯಂತ್ರಿಸುತ್ತದೆ?

A:-ಸೆರೆಬೆಲ್ಲಮ್

B:-ಹೈಪೋಥಾಲಮಸ್

C:-ಮೆಡುಲ್ಲಾ ಆಬ್ಲೊಂಗಾಟಾ

D:-ಥಾಲಮಸ್

Correct Answer:- Option-B

Question43:-ಮಾನವ ದೇಹದಲ್ಲಿ ಕೆಂಪು ರಕ್ತ ಕಣಗಳ ಸರಾಸರಿ ಜೀವಿತಾವಧಿ (ದಿನಗಳಲ್ಲಿ) ಎಷ್ಟು?

A:-100

B:-120

C:-110

D:-72

Correct Answer:- Option-B

Question44:-ಮಾನವ ಹೃದಯದ 'ಪೇಸ್‌ಮೇಕರ್' ಎಂದು ಯಾವುದನ್ನು ಕರೆಯಲಾಗುತ್ತದೆ?

A:-AV ನೋಡ್

B:-SA ನೋಡ್

C:-ಬಂಡಲ್ ಆಫ್ ಹಿಸ್

D:-ಪುರ್ಕಿಂಜೆ ಫೈಬರ್ಸ್

Correct Answer:- Option-B

Question45:-ಮನುಷ್ಯರಲ್ಲಿ ಮಲೇರಿಯಾದ ಅತ್ಯಂತ ಮಾರಣಾಂತಿಕ ರೂಪವನ್ನು ಉಂಟುಮಾಡಷ ಪ್ಲಾಸ್ಮೋಡಿಯಂ (Plasmodium) ಪ್ರಭೇದ ಯಾವುದು?

A:-ಪ್ಲಾಸ್ಮೋಡಿಯಂ ವೈವಾಕ್ಸ್

B:-ಪ್ಲಾಸ್ಮೋಡಿಯಂ ಫಾಲ್ಸಿಪಾರಮ್

C:-ಪ್ಲಾಸ್ಮೋಡಿಯಂ ಮಲೇರಿಯೇ

D:-ಪ್ಲಾಸ್ಮೋಡಿಯಂ ಓವೇಲ್

Correct Answer:- Option-B

Question46:-ಟೈಫಾಯಿಡ್ ರೋಗವನ್ನು ಪತ್ತೆಹಚ್ಚಲು ನಡೆಸಲಾಗುವ ಪ್ರಾಥಮಿಕ ರಕ್ತ ಪರೀಕ್ಷೆ ಯಾವುದು?

A:-ELISA ಪರೀಕ್ಷೆ

B:- ವೈಡಲ್ ಪರೀಕ್ಷೆ

C:-ವೆಸ್ಟರ್ನ್ ಬ್ಲಾಟ್ ಪರೀಕ್ಷೆ

D:-ಮ್ಯಾಂಟೌಕ್ಸ್ ಪರೀಕ್ಷೆ

Correct Answer:- Option-B

Question47:-ಯಾವ ಪರಾವಲಂಬಿ ಹುಳು ಫೈಲೇರಿಯಾಸಿಸ್ (ಆನೆಕಾಲು ರೋಗ) ಅನ್ನು ಉಂಟುಮಾಡುತ್ತದೆ?

A:-ವುಚೆರೇರಿಯಾ ಬ್ಯಾನ್‌ಕ್ರಾಫ್ಟಿ

B:-ಆಸ್ಕರಿಸ್ ಲುಂಬ್ರಿಕಾಯ್ಡ್

C:-ಎಂಟೆರೋಬಿಯಸ್ ವರ್ಮಿಕುಲಾರಿಸ್

D:-ಎಂಟಮೀಬಾ ಹಿಸ್ಟೊಲಿಟಿಕಾ

Correct Answer:- Option-A

Question48:-ಯಾವ ಪ್ರೊಟೊಜೋವಾ 'ಕಾಲಾ-ಅಜಾರ್' (Kala-azar) ರೋಗವನ್ನು ಉಂಟುಮಾಡುತ್ತದೆ?

A:-ಲೀಶ್ಮೇನಿಯಾ ಡೊನೊವಾನಿ

B:- ಟ್ರೈಪನೋಸೋಮಾ ಬ್ರೂಸಿ

C:-ಬಾಬೆಸಿಯಾ

D:-ಟಾಕ್ಸೊಪ್ಲಾಸ್ಮಾ

Correct Answer:- Option-A

Question49:-ಮೆದುಳಿನ ಯಾವ ಭಾಗವು ದೇಹದ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ?

A:-ಸೆರೆಬ್ರಮ್

B:- ಸೆರೆಬೆಲ್ಲಮ್

C:- ಮೆಡುಲ್ಲಾ ಆಬ್ಲೋಂಗಟಾ

D:-ಥಾಲಮಸ್

Correct Answer:- Option-B

Question50:-ವಿಟಮಿನ್ ಡಿ ಮತ್ತು ಕ್ಯಾಲ್ಸಿಯಂ ಕೊರತೆಯಿಂದಾಗಿ ವಯಸ್ಕರಲ್ಲಿ ಮೂಳೆಗಳು ದುರ್ಬಲಗೊಂಡು ಸುಲಭವಾಗಿ ಮುರಿಯುವ ಸ್ಥಿತಿಯನ್ನು ಏನೆಂದು ಕರೆಯುತ್ತಾರೆ?

A:-ಆಸ್ಟಿಯೋಮಲೇಶಿಯಾ

B:-ರಿಕೆಟ್ಸ್

C:-ಸ್ಪಾಂಡಿಲೈಟಿಸ್

D:-ಸಂಧಿವಾತ

Correct Answer:- Option-A

Question51:-ಮಾನವನ ಆರೋಗ್ಯ ಮತ್ತು ರೋಗಗಳಿಗೆ ಸಂಬಂಧಿಸಿದ ಸೂಕ್ಷ್ಮಜೀವಿ ಸಮುದಾಯಗಳನ್ನು ಅಧ್ಯಯನ ಮಾಡಲು ಯು.ಎಸ್. ನ್ಯಾಷನಲ್ ಇನ್‌ಸ್ಟಿಟ್ಯೂಟ್ಸ್ ಆಫ್ ಹೆಲ್ತ್ ಯಾವ ಸಂಶೋಧನಾ ಯೋಜನೆಯನ್ನು ಪ್ರಾರಂಭಿಸಿತು?

A:-ಹ್ಯೂಮನ್ ಜೀನೋಮ್ ಪ್ರಾಜೆಕ್ಟ್

B:-ಮೆಟಾಜಿನೋಮಿಕ್ಸ್

C:-ಹ್ಯೂಮನ್ ಮೈಕ್ರೋಬಯೋಮ್ ಪ್ರಾಜೆಕ್ಟ್

D:-ಮೈಕ್ರೋಬಯಾಲಜಿ

Correct Answer:- Option-C

Question52:-ಮ್ಯಾಂಗ್ರೋವ್ ಕಾಡುಗಳ ನಡುವೆ ನನ್ನ ಜೀವನ (My life among mangroves) ಎಂಬುದು ಪರಿಸರವಾದಿಯೊಬ್ಬರ ಆತ್ಮಕಥೆಯಾಗಿದ್ದು, ಇವರು ಮ್ಯಾಂಗ್ರೋವ್ ಕಾಡುಗಳ ಸಂರಕ್ಷಣೆಯ ಮೂಲಕ ಪ್ರಕೃತಿಯ ಮೇಲಿನ ತಮ್ಮ ಪ್ರೀತಿಯನ್ನು ಪ್ರದರ್ಶಿಸಿದ್ದರು. ಇದು ಯಾರ ಆತ್ಮಕಥೆ?

A:-ಕೆ.ವಿ. ದಯಾಳ್

B:- ಸಿ.ಆರ್. ನೀಲಕಂಠನ್

C:-ಟಿ.ಎನ್. ಪ್ರಕಾಶ್

D:-ಕಲ್ಲೆಲ್ ಪೊಕ್ಕುಡನ್

Correct Answer:- Option-D

Question53:-ಕೋಷ್ಟಕದಲ್ಲಿ ನೀಡಲಾದ ಮಾಹಿತಿಯನ್ನು ವಿಶ್ಲೇಷಿಸಿ ಮತ್ತು ಸರಿಯಾದ ಹೊಂದಾಣಿಕೆಯ ಜೋಡಿಯನ್ನು ಆಯ್ಕೆಮಾಡಿ.

ಅಂಕಣ A	ಅಂಕಣ B
(i) ಪೌಷ್ಟಿಕಾಂಶದ ಅಸ್ವಸ್ಥತೆ	(1) ಸಿಕಲ್ ಸೆಲ್ ರಕ್ತಹೀನತೆ
(ii) ಜೀವನಶೈಲಿ ಸಂಬಂಧಿತ ಕಾಯಿಲೆ	(2) ರಕ್ತಹೀನತೆ
(iii) ವೃತ್ತಿಜನ್ಯ ಕಾಯಿಲೆ	(3) ಮಧುಮೇಹ
(iv) ಆನುವಂಶಿಕ ಕಾಯಿಲೆ	(4) ರುಮಟಾಯ್ಡ್ ಸಂಧಿವಾತ
	(5) ಸಿಲಿಕೋಸಿಸ್

A:-(i)-(1), (ii)-(5), (iii)-(2), (iv)-(3)

B:-(i)-(2), (ii)-(3), (iii)-(5), (iv)-(1)

C:-(i)-(4), (ii)-(1), (iii)-(3), (iv)-(2)

D:-(i)-(2), (ii)-(4), (iii)-(3), (iv)-(5)

Correct Answer:- Option-B

Question54:-ಅಮೀಬಿಕ್ ಎನ್ಸೆಫಾಲಿಟಿಸ್ ಅನ್ನು ಉಂಟುಮಾಡುವ ರೋಗಕಾರಕ ಯಾವುದು?

A:-ಪ್ಲಾಸ್ಮೋಡಿಯಂ

B:- ಎಂಟಮೀಬಾ ಹಿಸ್ಟೊಲಿಟಿಕಾ

C:-ನೇಗ್ಲೇರಿಯಾ ಫೌಲೆರಿ

D:-ಲೆಪ್ಟೊಸ್ಪೈರಾ

Correct Answer:- Option-C

Question55:-ಕೆಳಗಿನ ಪಟ್ಟಿಯಿಂದ 'ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ'ವನ್ನು ಯಾವಾಗ ಆಚರಿಸಲಾಗುತ್ತದೆ ಎಂಬುದನ್ನು ಸೂಚಿಸುವ ಸರಿಯಾದ ಆಯ್ಕೆಯನ್ನು ಆರಿಸಿ:
(i) ಆಗಸ್ಟ್ 10
(ii) ಫೆಬ್ರವರಿ 10
(iii) ಸೆಪ್ಟೆಂಬರ್ 29
(iv) ಅಕ್ಟೋಬರ್ 10

A:-(i), (ii) ಸರಿಯಾಗಿವೆ

B:-(iii) ಸರಿಯಾಗಿದೆ

C:-(i), (iv) ಸರಿಯಾಗಿವೆ

D:-(iv) ಸರಿಯಾಗಿದೆ

Correct Answer:- Option-A

Question56:-'ಎಕ್ಸ್-ಸಿಟು' (Ex-situ) ಸಂರಕ್ಷಣೆಯು ಜೀವಿಗಳ ನೈಸರ್ಗಿಕ ಪರಿಸರ ವ್ಯವಸ್ಥೆಯ ಹೊರಗೆ, ಅವುಗಳ ನೈಸರ್ಗಿಕ ಆವಾಸಸ್ಥಾನವನ್ನು ಹೋಲುವಂತಹ ಆವಾಸಸ್ಥಾನವನ್ನು ಸೃಷ್ಟಿಸಿ ನಿಯಂತ್ರಿತ ಪರಿಸ್ಥಿತಿಗಳಲ್ಲಿ ಜೀವಿಗಳನ್ನು ರಕ್ಷಿಸುವುದನ್ನು

ಒಳಗೊಂಡಿರುತ್ತದೆ. ಈ ಕೆಳಗಿನವುಗಳಲ್ಲಿ ಯಾವುದು ಇದಕ್ಕೆ ಉದಾಹರಣೆಯಲ್ಲ?

A:-ಜೀನ್ ಬ್ಯಾಂಕ್‌ಗಳು

B:- ಪ್ರಾಣಿ ಸಂಗ್ರಹಾಲಯಗಳು

C:-ಸಸ್ಯೋದ್ಯಾನಗಳು

D:-ಸಮುದಾಯ ಮೀಸಲು ಪ್ರದೇಶಗಳು

Correct Answer:- Option-D

Question57:-ಫ್ಯಾಗೊಸೈಟೋಸಿಸ್ ಪ್ರಕ್ರಿಯೆಯಲ್ಲಿ ಯಾವ ಬಿಳಿ ರಕ್ತ ಕಣಗಳು ಭಾಗವಹಿಸುತ್ತವೆ?

A:-ಮೊನೊಸೈಟ್, ಲಿಂಫೋಸೈಟ್

B:-ಇಯೊಸಿನೊಫಿಲ್, ನ್ಯೂಟ್ರೋಫಿಲ್

C:-ಬೇಸೊಫಿಲ್, ನ್ಯೂಟ್ರೋಫಿಲ್

D:-ನ್ಯೂಟ್ರೋಫಿಲ್, ಮೊನೊಸೈಟ್

Correct Answer:- Option-D

Question58:-ಹೇಳಿಕೆ ಮತ್ತು ಕಾರಣವನ್ನು ವಿಶ್ಲೇಷಿಸಿ, ಸರಿಯಾದ ಉತ್ತರವನ್ನು ಆಯ್ಕೆಮಾಡಿ.
ಹೇಳಿಕೆ: ಮಗುವಿಗೆ ಕನಿಷ್ಠ ಎರಡು ವರ್ಷಗಳವರೆಗೆ ಎದೆಹಾಲುಣಿಸಬೇಕು.
ಕಾರಣ: ಎದೆಹಾಲಿನಲ್ಲಿ ಸೋಂಕುಗಳು, ಅತಿಸಾರ ಮತ್ತು ಅಲರ್ಜಿಗಳ ವಿರುದ್ಧ ರಕ್ಷಣೆ ನೀಡುವ ಪ್ರತಿಕಾಯಗಳು ಇರುತ್ತವೆ.

A:-ಹೇಳಿಕೆ ಸರಿಯಾಗಿದೆ; ಕಾರಣ ತಪ್ಪಾಗಿದೆ.

B:-ಹೇಳಿಕೆ ಮತ್ತು ಕಾರಣ ಎರಡೂ ಸರಿಯಾಗಿವೆ.

C:-ಹೇಳಿಕೆ ತಪ್ಪಾಗಿದೆ; ಕಾರಣ ಸರಿಯಾಗಿದೆ.

D:-ಹೇಳಿಕೆ ಮತ್ತು ಕಾರಣ ಎರಡೂ ತಪ್ಪಾಗಿವೆ.

Correct Answer:- Option-B

Question59:-ಯಾವ ಅನಿಲವು ಓಝೋನ್ ಪದರದ ಸವಕಳಿಗೆ ಕಾರಣವಾಗುತ್ತದೆ?

A:-ಆಮ್ಲಜನಕ

B:-CFC (ಕ್ಲೋರೋಫ್ಲೋರೋಕಾರ್ಬನ್)

C:-ಇಂಗಾಲದ ಡೈಆಕ್ಸೈಡ್

D:-ಮೀಥೇನ್

Correct Answer:- Option-B

Question60:-18 ವರ್ಷದೊಳಗಿನ ಮಕ್ಕಳಲ್ಲಿನ ಜನ್ಮಜಾತ ಹೃದಯ ರೋಗದ ಚಿಕಿತ್ಸೆಗಾಗಿ ಉಚಿತ ಶಸ್ತ್ರಚಿಕಿತ್ಸೆ ಒದಗಿಸುವ ಕೇರಳ ಸರ್ಕಾರದ ಯೋಜನೆ ಯಾವುದು?

A:-ಆರ್ದ್ರಮ್

B:- ಆಶ್ವಾಸಮ್

C:-ಇ-ಹೆಲ್ತ್

D:-ಹೃದಯಮ್

Correct Answer:- Option-D

Question61:-8^{11} ಪಡೆಯಲು 8^{10} ಕ್ಕೆ ಎಷ್ಟನ್ನು ಸೇರಿಸಬೇಕು?

A:-8

B:-8^{10}

C:-7×8^{10}

D:-8×8^{10}

Correct Answer:- Option-C

Question62:-ನಾಲ್ಕು ಅವಿಭಾಜ್ಯ ಸಂಖ್ಯೆಗಳ (prime numbers) ಗುಣಲಬ್ಧವು 1190 ಆಗಿದೆ. ಈ ಕೆಳಗಿನವುಗಳಲ್ಲಿ ಯಾವುದು ಆ ಸಂಖ್ಯೆಗಳಲ್ಲಿ ಒಂದಾಗಿರಬಹುದು?

A:-3

B:-5

C:-11

D:-13

Correct Answer:- Option-B

Question63:-40 ಸೆಂ.ಮೀ ಉದ್ದ, 20 ಸೆಂ.ಮೀ ಅಗಲ ಮತ್ತು 10 ಸೆಂ.ಮೀ ಎತ್ತರವಿರುವ ಆಯತಾಕಾರದ ಬ್ಲಾಕ್ ಅನ್ನು ಕರಗಿಸಿ ಘನವನ್ನು (cube) ತಯಾರಿಸಿದರೆ, ಆ ಘನದ ಒಂದು ಬದಿಯ ಉದ್ದ ಎಷ್ಟು?

A:-10 ಸೆಂ.ಮೀ,

B:- 20 ಸೆಂ.ಮೀ.

C:-40 ಸೆಂ.ಮೀ.

D:-30 ಸೆಂ.ಮೀ.

Correct Answer:- Option-B

Question64:-$\frac{1}{64}, \frac{1}{16}, \frac{1}{4}, 1, \ldots$ ಈ ಸರಣಿಯ 5ನೇ ಪದ ಯಾವುದು?

A:-$\frac{1}{4}$

B:-4

C:-16

D:-$\frac{1}{16}$

Correct Answer:- Option-B

Question65:-ಕ್ಯಾಲೆಂಡರ್ ತಿಂಗಳಿನಲ್ಲಿ ಚೌಕವನ್ನು (square) ರೂಪಿಸುವ ನಾಲ್ಕು ದಿನಾಂಕಗಳ ಮೊತ್ತವು 96 ಆಗಿದ್ದರೆ, ಆ ಚೌಕದಲ್ಲಿರುವ ಅತೀ ದೊಡ್ಡ ದಿನಾಂಕ ಯಾವುದು?

A:-27

B:- 20

C:-28

D:-29

Correct Answer:- Option-C

Question66:-ಜುಲೈ 20, 2020 ಸೋಮವಾರವಾಗಿದೆ. ಹಾಗಾದರೆ, ಏಪ್ರಿಲ್ 20, 2020 ಯಾವ ದಿನವಾಗಿರುತ್ತದೆ?

A:-ಭಾನುವಾರ

B:- ಸೋಮವಾರ

C:-ಮಂಗಳವಾರ

D:-ಬುಧವಾರ

Correct Answer:- Option-B

Question67:-ಸರಣಿಯನ್ನು ಪೂರ್ಣಗೊಳಿಸಿ
R2B, T4E, V7H, X11K, _____

A:-Z16M

B:-Z17N

C:-Z16N

D:-Z16L

Correct Answer:- Option-C

Question68:-ವಿಜಯ್ ತನ್ನ ಮನೆಯಿಂದ ಉತ್ತರ ದಿಕ್ಕಿಗೆ 3 ಕಿ.ಮೀ ಪ್ರಯಾಣಿಸಿ, ನಂತರ ಪೂರ್ವಕ್ಕೆ ತಿರುಗಿ 5 ಕಿ.ಮೀ ಪ್ರಯಾಣಿಸಿದನು. ಅಲ್ಲಿಂದ, ಅವನು ಉತ್ತರಕ್ಕೆ ತಿರುಗಿ 2 ಕಿ.ಮೀ ಪ್ರಯಾಣಿಸಿ, ನಂತರ ಮತ್ತೆ ಪೂರ್ವಕ್ಕೆ ತಿರುಗಿ 7 ಕಿ.ಮೀ ಪ್ರಯಾಣಿಸಿ ಅಂಗಡಿಯೊಂದನ್ನು ತಲುಪಿದನು. ವಿಜಯ್‌ನ ಮನೆ ಮತ್ತು ಅಂಗಡಿಯ ನಡುವಿನ ಅಂತರ ಎಷ್ಟು?

A:-13 ಕಿ.ಮೀ

B:- 17 ಕಿ.ಮೀ

C:-12 ಕಿ.ಮೀ

D:-10 ಕಿ.ಮೀ

Correct Answer:- Option-A

Question69:-ಒಂದು ಸಂಕೇತ ಭಾಷೆಯಲ್ಲಿ 'HIBISCUS' ಅನ್ನು 'KJKDEUUW' ಎಂದು ಬರೆದರೆ, 'MARIGOLD' ಅನ್ನು ಹೇಗೆ ಬರೆಯಲಾಗುತ್ತದೆ?

A:-CNKTPJNF

B:- COTKPGNF

C:-COKTIQNF

D:-COKTQIFN

Correct Answer:- Option-D

Question70:-'+' ಚಿಹ್ನೆಯು ಭಾಗಾಕಾರವನ್ನು, '-' ಚಿಹ್ನೆಯು ಗುಣಾಕಾರವನ್ನು, '×' ಚಿಹ್ನೆಯು ವ್ಯವಕಲನವನ್ನು (ಕಳೆಯುವುದನ್ನು) ಮತ್ತು '÷' ಚಿಹ್ನೆಯು ಸಂಕಲನವನ್ನು (ಕೂಡುವುದನ್ನು) ಪ್ರತಿನಿಧಿಸಿದರೆ,
12 + 3 ÷ 5 - 4 × 4 + 2 ÷ 7 - 2 ರ ಮೌಲ್ಯವೇನು?

A:-38

B:- 34

C:-36

D:-40

Correct Answer:- Option-C

Question71:-ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದ ಯಾವುದು?

A:-ಅಲರು

B:-ಎಲರು

C:-ಸುಮ

D:-ಕುಸುಮ

Correct Answer:- Option-B

Question72:-’ನಾಟ್ಯ ಮಾಡುವವಳು’ - ಎಂಬುದಕ್ಕೆ ಇರುವ ಒಂದು ಪದ ಯಾವುದು?

A:-ನಟಿ

B:-ಗಾಯಕಿ

C:-ನರ್ತಕಿ

D:-ನರ್ತನ

Correct Answer:- Option-C

Question73:-ಕೆಳಗಿನವುಗಳಲ್ಲಿ ಸರಿಯಾದ ವಾಕ್ಯವನ್ನು ಆರಿಸಿರಿ.

A:-ಮಕ್ಕಳು ಮನೆಗೆ ಶಾಲೆಯಿಂದ ಹೋದರು

B:-ಶಾಲೆಯಿಂದ ಮನೆಗೆ ಹೋದರು ಮಕ್ಕಳು

C:-ಶಾಲೆಯಿಂದ ಹೋದರು ಮನೆಗೆ ಮಕ್ಕಳು

D:-ಮಕ್ಕಳು ಶಾಲೆಯಿಂದ ಮನೆಗೆ ಹೋದರು

Correct Answer:- Option-D

Question74:-ಕೆಳಗಿನವುಗಳಲ್ಲಿ ತದ್ಭವ ಪದವನ್ನು ಗುರತಿಸಿರಿ

A:-ಬಣ್ಣ

B:-ವರ್ಣ

C:-ವರ್ಷ

D:-ಅಕ್ಷರ

Correct Answer:- Option-A

Question75:-ದೇವ + ಇಂದ್ರ - ಈ ಪದಗಳು ಸೇರಿದಾಗ ಸಿಗುವ ಸಂಧಿಪದ ಯಾವುದು?

A:-ದೇವೇಂದ್ರ

B:-ದೇವಿಂದ್ರ

C:-ದೇವೀಂದ್ರ

D:-ದೇವಾಂದ್ರ

Correct Answer:- Option-A

Question76:-ಪ್ರತ್ಯಕ್ಷ - ಈ ಪದದ ವಿರೋಧಾರ್ಥ ಪದ ಯಾವುದು?

A:-ಪರೀಕ್ಷೆ

B:-ಪರೋಕ್ಷ

C:-ಸಮೀಕ್ಷೆ

D:-ಸುರಕ್ಷ

Correct Answer:- Option-B

Question77:-ತುಂಬಿದ ಕೊಡ _____ ಈ ಗಾದೆ ಮಾತನ್ನು ಪೂರ್ಣಗೊಳಿಸಿರಿ

A:-ಬೀಳುವುದಿಲ್ಲ

B:-ಒಡೆಯುವುದಿಲ್ಲ

C:-ತುಳುಕುವುದಿಲ್ಲ

D:-ಯಾವುದೂ ಅಲ್ಲ

Correct Answer:- Option-C

Question78:-ಕಾಗುಣಿತ ದೋಷವಿಲ್ಲದ ಪದ ಯಾವುದು?

A:-ಮಾರ್ಗದರ್ಶಣ

B:-ಮಾರ್ಗದರ್ಷಣ

C:-ಮಾರ್ಗದರ್ಷನ

D:-ಮಾರ್ಗದರ್ಶನ

Correct Answer:- Option-D

Question79:-Failure is the stepping stone to success - ಈ ವಾಕ್ಯದ ಸೂಕ್ತ ಕನ್ನಡ ಭಾಷಾಂತರ ಯಾವುದು?

A:-ಸೋಲೇ ಸೋಲಿನ ಸೋಪಾನ

B:-ಸೋಲೇ ಗೆಲುವಿನ ಸೋಪಾನ

C:-ಗೆಲುವೇ ಸೋಲಿನ ಸೋಪಾನ

D:-ಗೆಲುವೇ ಗೆಲುವಿನ ಸೋಪಾನ

Correct Answer:- Option-B

Question80:-ರಾಜ - ಈ ಪದದ ಸರಿಯಾದ ಸ್ತ್ರೀಲಿಂಗ ರೂಪ ಯಾವುದು?

A:-ರಾಜಾಂಗನೆ

B:-ರಾಜತಿ

C:-ರಾಣಿ

D:-ಮಹಾರಾಜ

Correct Answer:- Option-C

Question81:-ದೇಹದ ಗಾತ್ರದ ಆಧಾರದ ಮೇಲೆ, ಜೇನುನೊಣಗಳ ವಸಾಹತುವಿನ ಅತೀ ದೊಡ್ಡ ಸದಸ್ಯ ಯಾವುದು?

A:-ರಾಣಿ

B:- ಕೆಲಸಗಾರ

C:-ಡ್ರೋನ್

D:-ಸೈನಿಕ

Correct Answer:- Option-A

Question82:-ಯಾವ ಫೆರೋಮೋನ್ ವಸಾಹತುವಿನ ಏಕತೆಯನ್ನು ಕಾಯ್ದುಕೊಳ್ಳುತ್ತದೆ?

A:-ರಾಣಿಯ ಡುಫೋರ್ ಗ್ರಂಥಿಯ ಫೆರೋಮೋನ್

B:-ಟರ್ಗಲ್ ಗ್ರಂಥಿಯ ಫೆರೋಮೋನ್

C:-ರಾಣಿಯ ಮ್ಯಾಂಡಿಬುಲರ್ ಫೆರೋಮೋನ್

D:-ರಾಣಿಯ ಟಾರ್ಸಲ್ ಫೆರೋಮೋನ್

Correct Answer:- Option-C

Question83:-ವಸಾಹತುವಿನಲ್ಲಿರುವ ಜೀನುನೊಣಗಳು ವಿಭಜನೆಯಾಗುವ ನೈಸರ್ಗಿಕ ಪ್ರಕ್ರಿಯೆಯನ್ನು _____ ಎಂದು ಕರೆಯಲಾಗುತ್ತದೆ.

A:-ಸೂಪರ್‌ಸೀಡರ್

B:-ರಾಬಿಂಗ್

C:-ಸ್ವಾರ್ಮಿಂಗ್

D:-ಅಬ್‌ಸ್ಕಾಂಡಿಂಗ್

Correct Answer:- Option-C

Question84:-ಕೆಲಸಗಾರ ಜೀನುನೊಣವು ಹೊಲದಿಂದ ಪರಾಗವನ್ನು ತನ್ನ _____ ಮೂಲಕ ಗೂಡಿಗೆ ತರುತ್ತದೆ.

A:-ಮುಂಗಾಲು

B:- ಹಿಂಗಾಲು

C:-ಮಧ್ಯದ ಕಾಲು

D:-ಮಧ್ಯದ ಕಾಲು ಮತ್ತು ಹಿಂಗಾಲು

Correct Answer:- Option-B

Question85:-ಜೀನುನೊಣಗಳಿಗೆ ಪ್ರೋಟೀನ್‌ನ ಪ್ರಾಥಮಿಕ ಮೂಲ ಯಾವುದು?

A:-ಮಕರಂದ

B:-
ನೀರು

C:-ಪ್ರೊಪೊಲಿಸ್

D:-ಪರಾಗ

Correct Answer:- Option-D

Question86:-ದೀರ್ಘಕಾಲದವರೆಗೆ ಜೀನುನೊಣಗಳಿಗೆ ಅಗತ್ಯವಾದ ಆಹಾರವನ್ನು (ಪರಾಗ ಮತ್ತು ಮಕರಂದ) ಒದಗಿಸಲು ಈ ಕೆಳಗಿನವುಗಳಲ್ಲಿ ಯಾವುದನ್ನು ನೆಡುವುದು ಆಧಾರವಾಗಿದೆ?

A:-ವಾರ್ಷಿಕ ಬೆಳೆಗಳು

B:- ಕಾಲೋಚಿತ ಮರಗಳು

C:-ಅಲಂಕಾರಿಕ ಸಸ್ಯಗಳು

D:-ಎಲೆಗಳಿಗಾಗಿ ಬೆಳೆಸುವ ಸಸ್ಯಗಳು

Correct Answer:- Option-B

Question87:-ಇಟಾಲಿಯನ್ ಜೀನುನೊಣಗಳನ್ನು ಸಾಕಲು ಯಾವ ಜೇನು ಪೆಟ್ಟಿಗೆಗಳನ್ನು ಬಳಸಲಾಗುತ್ತದೆ?

A:-ನ್ಯೂಟನ್ ಹೈವ್

B:- ಐಎಸ್ಐ ಹೈವ್

C:-ಲ್ಯಾಂಗ್ಸ್ಟ್ರಾತ್ ಹೈವ್

D:-ಜಿಯೋಲಿಕೋಟ್ ಹೈವ್

Correct Answer:- Option-C

Question88:-ಜೇನುನೊಣಗಳನ್ನು ಶಾಂತಗೊಳಿಸಲು ಯಾವ ಸಾಧನವನ್ನು ಬಳಸಲಾಗುತ್ತದೆ?

A:-ಬೀ ಸ್ಮೋಕರ್

B:-ಕ್ವೀನ್ ಗೇಟ್

C:-ಪರಾಗದ ಬಲೆ

D:-ಡ್ರೋನ್ ಬಲೆ

Correct Answer:- Option-A

Question89:-ಸೌಮ್ಯವಾದ ವಿದ್ಯುತ್ ಆಘಾತವನ್ನು ಒಳಗೊಂಡಿರುವ ವಿಧಾನವನ್ನು ಯಾವುದನ್ನು ಸಂಗ್ರಹಿಸಲು ಬಳಸಲಾಗುತ್ತದೆ?

A:-ಜೇನುತುಪ್ಪ

B:- ಜೇನುಮೇಣ

C:-ಜೇನುನೊಣದ ವಿಷ

D:-ಪರಾಗ

Correct Answer:- Option-C

Question90:-ಕಣಜಗಳು ಮತ್ತು ಮೇಣದ ಚಿಟ್ಟೆಗಳು ಜೇನುಗೂಡಿನೊಳಗೆ ಪ್ರವೇಶಿಸುವುದನ್ನು ತಡೆಯುವ ಸಾಧನ ಯಾವುದು?

A:-ಕ್ವೀನ್ ಎಕ್ಸ್ಕ್ಲೂಡರ್

B:-ಕ್ವೀನ್ ಗೇಟ್

C:-ಡಮ್ಮಿ ಡಿವಿಷನ್ ಬೋರ್ಡ್

D:-ಹೈವ್ ಟೂಲ್

Correct Answer:- Option-B

Question91:-'ಬೀ ಸ್ಪೇಸ್' (ಜೇನುನೊಣದ ಸ್ಥಳಾವಕಾಶ) ಪರಿಕಲ್ಪನೆಯನ್ನು ಯಾರು ಪ್ರಸ್ತಾಪಿಸಿದರು?

A:-ಫ್ರಾಂಜ್ ವಾನ್ ಹ್ರುಷ್ಕಾ

B:- ಇ.ಸಿ. ಪೋರ್ಟರ್

C:-ಎಲ್.ಎಲ್. ಲ್ಯಾಂಗ್‌ಸ್ಟ್ರಾತ್

D:-ಜೋಹಾನ್ಸ್ ಮೆಹ್ರಿಂಗ್

Correct Answer:- Option-C

Question92:-ಭಾರತೀಯ ಜೇನುನೊಣವು ತನ್ನ ಜೇನುಗೂಡನ್ನು ನಿರ್ಮಿಸಲು ಯಾವ ಮೇಣವನ್ನು ಬಳಸುತ್ತದೆ

A:-ತನ್ನದೇ ಆದ ದೇಹದಿಂದ ಉತ್ಪಾದಿಸುವ ಮೇಣ

B:-ಸಸ್ಯಗಳಿಂದ ಸಂಗ್ರಹಿಸಿದ ಮೇಣ

C:-ಪೆಟ್ರೋಲಿಯಂ ಉತ್ಪನ್ನಗಳಿಂದ ಪಡೆದ ಮೇಣ

D:-ಜೇನುನೊಣಗಳ ಗುಂಪಿಗೆ ಕೃತಕವಾಗಿ ಒದಗಿಸಿದ ಮೇಣ

Correct Answer:- Option-A

Question93:-ಕಚ್ಚದ ಜೇನುನೊಣ ಯಾವುದು?

A:-ಭಾರತೀಯ ಜೇನುನೊಣ

B:-ಡಾಮರ್ ಜೇನುನೊಣ

C:-ಇಟಾಲಿಯನ್ ಜೇನುನೊಣ

D:-ದೊಡ್ಡ ಜೇನುನೊಣ

Correct Answer:- Option-B

Question94:-ರಾಣಿ ಜೇನುನೊಣದ ಕೋಶವನ್ನು ಹೇಗೆ ಗುರುತಿಸಲಾಗುತ್ತದೆ?

A:-ನೇತಾಡುವ ಕೋಶಗಳು

B:- ಸಾಮಾನ್ಯ ಕ್ಯಾಪ್‌ಗಳನ್ನು ಹೊಂದಿರುವ ಕೋಶಗಳು

C:-ಒಳಗೆ ಕುಸಿದಿರುವಂತಹ ಕ್ಯಾಪ್‌ಗಳನ್ನು ಹೊಂದಿರುವ ಕೋಶಗಳು

D:-ಎತ್ತರದ ಕ್ಯಾಪ್‌ಗಳನ್ನು ಮತ್ತು ಸೂಜಿಯ ಗಾತ್ರದ ರಂಧ್ರಗಳನ್ನು ಹೊಂದಿರುವ ಕೋಶಗಳು

Correct Answer:- Option-A

Question95:-FSSAI ನಿಗದಿಪಡಿಸಿದ ಜೇನುತುಪ್ಪದಲ್ಲಿನ ಗರಿಷ್ಠ ತೇವಾಂಶದ ಮಿತಿ ಎಷ್ಟು?

A:-24%

B:- 30%

C:-20%

D:-22%

Correct Answer:- Option-C

Question96:-ಜೇನುನೊಣಗಳಿಗೆ ಬರುವ ಬ್ಯಾಕ್ಟೀರಿಯಾ, ವೈರಸ್, ಶಿಲೀಂಧ್ರ (Fungal) ಮತ್ತು ಪ್ರೊಟೊಜೋವಾ ರೋಗಗಳಲ್ಲಿ, ಈ ಕೆಳಗಿನವುಗಳಲ್ಲಿ ಯಾವುದು ವೈರಸ್ ರೋಗಕ್ಕೆ ಸೇರಿದೆ?

A:- ನೋಸೆಮಾ ರೋಗ

B:-ಥಾಯ್ ಸ್ಯಾಕ್ ಬ್ರೂಡ್

C:-ಸ್ಟೋನ್ ಬ್ರೂಡ್

D:-ಯುರೋಪಿಯನ್ ಫೌಲ್ ಬ್ರೂಡ್

Correct Answer:- Option-B

Question97:-ಕೇರಳದಲ್ಲಿ ಜೇನುಸಾಕಣೆಗೆ ಇರುವ ಪ್ರಮುಖ ಬೆದರಿಕೆ ಯಾವುದು?

A:-ಅಮೆರಿಕನ್ ಫೌಲ್‌ಬ್ರೂಡ್

B:- ಥಾಯ್ ಸ್ಯಾಕ್‌ಬ್ರೂಡ್

C:-ಯುರೋಪಿಯನ್ ಫೌಲ್‌ಬ್ರೂಡ್

D:-ನೋಸೆಮಾ ರೋಗ

Correct Answer:- Option-B

Question98:-ಜೇನುನೊಣಗಳ ಅತೀ ದೊಡ್ಡ ಶತ್ರು ಯಾವುದು?

A:-ಗೆದ್ದಲು

B:-ಟ್ರಾಕಿಯಲ್ ಮೈಟ್

C:-ಕಣಜ

D:-ವಾರ್ರೋವಾ ಮೈಟ್

Correct Answer:-Question Cancelled

Question99:-ಕಚ್ಚದ ಜೇನುನೊಣದ (stingless bee) ವೈಜ್ಞಾನಿಕ ಹೆಸರೇನು?

A:-ಎಪಿಸ್ ಫ್ಲೋರಿಯಾ

B:-ಟೆಟ್ರಾಗೋನುಲಾ ಇರಿಡಿಪೆನ್ನಿಸ್

C:-ವೆಸ್ಪಾ ಸಿಂಕ್ಟೆಟಾ

D:-ಎನ್ಕಾರ್ಸಿಯಾ ಜಾತಿಗಳು

Correct Answer:- Option-B

Question100:-ಭಾರತದಲ್ಲಿ ವೈಜ್ಞಾನಿಕ ಜೇನುಸಾಕಣೆಯ ಸಮಗ್ರ ಅಭಿವೃದ್ಧಿಗಾಗಿ ಇರುವ ಅತ್ಯುನ್ನತ ನೋಡಲ್ ಸಂಸ್ಥೆ ಯಾವುದು?

A:-National Beekeeping and Honey Mission (NBHM)

B:-Central Bee Research and Training Institute (CBRTI)

C:-National Bee Board (NBB)

D:-Indian Council of Agricultural Research (ICAR)

Correct Answer:- Option-C